ಯೂನಿಟ್ ಎಂದು ಮಾಡಿ ಕೊಡುತ್ತಾರೆ. ಅದಕ್ಕಾಗಿ ಈಗಾಗಲೇ ಪ್ರಕಟವಾದಂತಹ ಮತ್ತು ಸ್ಪೆಷಲ್ ತಹಸೀಲ್ದಾರ್ ಮಾಡಿ ಎಂದು ಏನು ಕೊಟ್ಟಿದ್ದಾರೆ, ಅದಕ್ಕೆ ನೀವು ಪರ್ಮನೆಂಟಾಗಿ ಮಾಡಿದರೆ, ಅದಕ್ಕೆ ಜ್ಯೂರಿಸ್ಡಿಕ್ಷನ್ ಫಿಕ್ಸ್ ಆಗಿದೆ, ಜನಸಂಖ್ಯೆ ಫಿಕ್ಸ್ ಆಗಿದೆ, ಹೆಡ್‌ಕ್ವಾರ್ಟರ್ಸ್ ಫಿಕ್ಸ್ ಆಗಿದೆ, ಸ್ಪೆಷಲ್ ತಹಶೀಲ್ದಾರ್‌ರನ್ನು ತಾವು ಹಾಕಿದ್ದೀರಿ, ಎಲ್ಲಾ ಕೂಡ ಆಗಿದೆ. ಅದಕ್ಕಾಗಿ ದಯವಿಟ್ಟು ಅದನ್ನು ಪರ್ಮನೆಂಟ್ ಮಾಡಿದರೆ, ಒಳ್ಳೆಯದಾಗುತ್ತದೆ. ಈ ಹಿಂದೆ ವಾಟಾಳ್ ನಾಗರಾಜ್‌ರವರು ಪ್ರಯತ್ನ ಮಾಡಿ ಚಾಮರಾಜನಗರ ಜಿಲ್ಲೆಯನ್ನೇ ಮಾಡಿಕೊಂಡು ಬಿಟ್ಟರು. ನನಗೂ ಬಿಟ್ಟು ಎಲ್ಲರಿಗೂ ಕೈ ಬಿಟ್ಟು, ಅವರು ಹೋಗಿ ಜೆ.ಹೆಚ್. ಪಟೇಲರ ಬಳಿ ಕುಳಿತು ಮಾಡಿಸಿಕೊಂಡು ಬಿಟ್ಟರು. ಕನಿಷ್ಟ ಈ ತಹಶೀಲ್ದಾರ್ ಆಫೀಸಾದರೂ ತಾವು ಮಾಡಿ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಏನು ಒಂದು ವಿಚಾರವನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ಸರ್ಕಾರದ ಸಹಮತ ಇದೆ. ಈಗಾಗಲೇ, ವಾಸುದೇವರಾವ್‌ರವರ ಒಂದು ಕಮಿಟಿ, ಹುಂಡೇರ್ಕಾರ್‌ರವರ ಕಮಿಟಿ, ಗದ್ದೀಗೌಡರ ಕಮಿಟಿ, ಈ ಎಲ್ಲಾ ಆಯೋಗಗಳು ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಪುನರ್‌ವಿಂಗಡನೆ ಮಾಡುವ ಬಗ್ಗೆ ಆಯೋಗಗಳನ್ನು ಏನು ನೇಮಕ ಮಾಡಲಾಗಿತ್ತು, ಅವರು ವರದಿಗಳನ್ನು ಕೊಟ್ಟಿದ್ದಾರೆ. ಆ ವರದಿಗಳು ಇವತ್ತು ಸರ್ಕಾರದ ಮುಂದಿವೆ. ಆ ಆಯೋಗಗಳ ವರದಿಯನ್ವಯ, ಇವತ್ತು ಯಾವ ಯಾವ ತಾಲ್ಲೂಕುಗಳನ್ನು ಪುನರ್ ವಿಂಗಡನೆ ಮಾಡಿ ಹೊಸ ತಾಲ್ಲೂಕುಗಳನ್ನು ಮಾಡಬಹುದು ಎನ್ನುವ ಬಗ್ಗೆ ಸರ್ಕಾರದ ಮುಂದೆ ವಿಚಾರ ಇದೆ. ಆ ಹಿನ್ನೆಲೆಯಲ್ಲಿ ವಿಶೇಷ ತಹಶೀಲ್ದಾರ್‌ಗಳನ್ನು ಎಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ನಿಯೋಜನೆ ಮಾಡಿದ್ದೇವೆ, ಆ ಎಲ್ಲಾ ತಾಲ್ಲೂಕುಗಳು ತಾಲ್ಲೂಕುಗಳಾಗಬೇಕೆನ್ನುವ ಉದ್ದೇಶದಿಂದ ಮಾಡಿರತಕ್ಕಂಥದ್ದು. ಆದರೆ ಒಂದೇ ಒಂದು ಅಡಚಣೆ ಇದೆ. ತಾಲ್ಲೂಕುಗಳನ್ನು ಕ್ರಿಯೇಟ್ ಮಾಡುವುದಕ್ಕೆ ಎಲ್ಲಿಂದಲೂ ಯಾವುದೇ ವಿರೋಧ ಇಲ್ಲ. ಸರ್ಕಾರವೂ ಕೂಡ ಅದಕ್ಕೆ ಬದ್ಧವಾಗಿದೆ. ಒಂದು ಸಮಸ್ಯೆ ಏನಾಗಿದೆ, ಇವತ್ತು ಡೀ ಲಿಮಿಟೇಷನ್ ಕಮಿಟಿಯವರು ಈ ವಿಧಾನ ಸಭೆಗಳ ಕ್ಷೇತ್ರಗಳ ಪುನರ್ ವಿಂಗಡನೆ ನಡೆಯುತ್ತಿರುವುದರಿಂದ ಡೀ ಲಿಮಿಟೇಷನ್ ಕಮಿಟಿಯವರೇ ಒಂದು ಆದೇಶವನ್ನು ಕೊಟ್ಟಿದ್ದಾರೆ. ಈ ಪ್ರೋಸೆಸ್ ಎಲ್ಲಾ ಮುಗಿಯುವವರೆಗೂ ಯಾವುದೇ ಒಂದು ಹೊಸ ತಾಲ್ಲೂಕುಗಳನ್ನಾಗಲಿ, ಹೊಸ ಅಡ್ಮಿನಿಸ್ಟ್ರೇಷನ್ ಯೂನಿಟ್‌ಗಳನ್ನು ಮಾಡುವಂಥಾದ್ದಾಗಲಿ, ಇವನ್ನು ಯಾವುದೂ ಮಾಡಬಾರದೆನ್ನುವ ಸೂಚನೆ ಪ್ರಕಾರ ಇವತ್ತು ಸರ್ಕಾರ ಮಾಡುತ್ತಿಲ್ಲ. ಅದೊಂದು ಅಡಚಣೆ ಬಿಟ್ಟರೆ ಈ ತಾಲ್ಲೂಕುಗಳನ್ನು ಮಾಡುವ ಬಗ್ಗೆ ಯಾವುದೇ ಅಡಚಣೆ ಇಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಸಿ.ಟಿ. ರವಿ. ಇಲ್ಲ.

ಅರಸೀಕೆರೆ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿಗೆ ಪರಿಹಾರ

198 (1061) ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರಸೀಕೆರೆ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕರಡಿಗಳ ಹಾವಳಿ ಸಂಖ್ಯೆಯನ್ನು ಗುರುತಿಸಲಾಗಿದೆಯೇ;

ಇ) ಕಳೆದ ಎರಡು ವರ್ಷಗಳಿಂದ ಈ ಕರಡಿಗಳ ಹಾವಳಿಯಿಂದ ಕಡಿತಕ್ಕೊಳಗಾದವರ ಹಾಗೂ ಮೃತರಾದವರ ಸಂಖ್ಯೆ ಎಷ್ಟು;

ಈ) ಅರಣ್ಯ ಇಲಾಖೆಯು ಮುಂಜಾಗ್ರತೆಯಾಗಿ ಯಾವ ಕ್ರಮಗಳನ್ನು ಕೈಗೊಂಡಿದೆ;

ಉ) ಕರಡಿ ಕಡಿತಕ್ಕೊಳಗಾದವರಿಗೆ ಸೂಕ್ತ ಪರಿಹಾರ ಧನವನ್ನು ನೀಡಲಾಗಿದೆಯೇ;

ಊ) ಎಷ್ಟೆಷ್ಟು ಪರಿಹಾರ ನೀಡಲಾಗಿದೆ (ಪರಿಹಾರ ಪಡೆದವರ ವಿವರಗಳನ್ನು ನೀಡುವುದು);

ಋ) ಈ ಪರಿಹಾರ ಧನಕ್ಕಾಗಿ ಬಾಕಿ ಇರುವ ಪ್ರಕರಣಗಳೆಷ್ಟು ಹಾಗೂ ಯಾವಾಗ ವಿತರಿಸಲಾಗುವುದು?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು.

ಆ) ಹೌದು.

ಇ) ಕಡಿತಕ್ಕೊಳಗಾದವರು – 20 ಜನ

ಮೃತರಾದವರು – ಇಲ್ಲ.

ಈ) ಕರಡಿಗಳನ್ನು ಬೆಟ್ಟ ಮತ್ತು ಅರಣ್ಯ ಪ್ರದೇಶಕ್ಕೆ ಓಡಿಸುವ ಸಲುವಾಗಿ ಸಿಬ್ಬಂದಿ ನೇಮಿಸಲಾಗಿದೆ.

ಉ) ಹೌದು.

ಊ) ಕಳೆದ ಎರಡು ವರ್ಷಗಳಿಂದ ಕರಡಿಗಳಿಂದ ಕಡಿತಕ್ಕೊಳಗಾದವರಿಗೆ ಇಲಾಖಾವತಿಯಿಂದ ನೀಡಿರುವ ಪರಿಹಾರದ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಪರಿಹಾರ ಪಡೆದವರ ವಿವರ	ಮೊತ್ತ (ರೂ.ಗಳಲ್ಲಿ)
1.	ಶ್ರೀ ದೇವರಾಜು ಬಿನ್ ವೀರಪ್ಪ ರಾಮೇನಹಳ್ಳಿ ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು.	1,800–00
2.	ಶ್ರೀ ನಂಜುಂಡೇಗೌಡ, ಕಸ್ತೂರಿ ಕೊಪ್ಪಲು, ಜಾವಗಲ್ ಹೋಬಳಿ, ಅರಸೀಕೆರೆ ತಾಲ್ಲೂಕು.	1,200–00
3.	ಶ್ರೀ ನಂಜುಂಡಪ್ಪ, ರಾಂಪುರ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು.	2,200–00
4.	ಶ್ರೀ ಶ್ರೀಕಂಠಪ್ಪ, ಅಗ್ಗುಂದ, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು.	250–00
5.	ಶ್ರೀ ಶಂಕರಪ್ಪ, ಅಮ್ಮನಕಟ್ಟೆ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	1,200–00
6.	ಶ್ರೀಮತಿ ಶಂಕರಮ್ಮ, ಅಮ್ಮನಕಟ್ಟೆ ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	500–00

7.	ಶ್ರೀ ಸುಬ್ಬಾಬೋವಿ, ಕಾಳೇನಹಳ್ಳಿ ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು	800–00
8.	ಶ್ರೀ ಪುಟ್ಟಯ್ಯ ಬಿನ್ ಕರಿಯಯ್ಯ, ಮುದ್ರನಾಯ್ಕನ ಪಾಳ್ಯ, ತಿಪಟೂರು ತಾಲ್ಲೂಕು	2,000–00
9.	ಶ್ರೀ ತಿಮ್ಮಪ್ಪ ಬಿನ್ ಕರಿಯನಾಯಕ್, ಗೊಲ್ಲರಹಳ್ಳಿ, ಕಣಕಟ್ಟೆ ಹೋಬಳಿ , ಅರಸೀಕೆರೆ ತಾಲ್ಲೂಕು	1,500–00
10.	ಶ್ರೀ ಗವಿರಂಗಪ್ಪ, ಬೋರನಕರೆ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	1,700–00
11.	ಶ್ರೀ ಚಿಕ್ಕಣ್ಣ, ನರಸೀಪುರ ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	3,000–00
12.	ಶ್ರೀಮತಿ ವಿಜಯಕುಮಾರಿ, ಶಶಿವಾಳ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	5,000–00
13.	ಶ್ರೀ ಗಂಗನಾಯ್ಕ ವಾಲೇಹಳ್ಳಿ, ಬಾಣಾವರ ಹೋಬಳಿ, ಅರಸೀಕೆರೆ ತಾಲ್ಲೂಕು	4,000–00
14.	ಶ್ರೀ ಮೂರ್ತಪ್ಪ, ಯರೇಹಳ್ಳಿ ಪಾಳ್ಯ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	4,000–00
15.	ಶ್ರೀ ಜೆ.ಬಿ. ಕೊಟ್ಟೂರಪ್ಪ, ಗಿರಿ ದೊಮ್ಮನಹಳ್ಳಿ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	1,500–00
16.	ಶ್ರೀ ವೀರಪ್ಪ ಬಿನ್ ನಂಜೇಗೌಡ, ಹೊಳಲ್ಕೆರೆ, ಅರಸೀಕೆರೆ ತಾಲ್ಲೂಕು	15,000–00
17.	ಶ್ರೀ ಚಂದ್ರಪ್ಪ, ಕಸುವನಹಳ್ಳಿ, ಕಣಕಟ್ಟೆ ಹೋಬಳಿ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	1,000–00
18.	ಶ್ರೀ ಸಿದ್ದಯ್ಯ ಕಸುವನಹಳ್ಳಿ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	1,000–00
19.	ಶ್ರೀ ಸಿದ್ದಪ್ಪ ಬಿನ್ ನಿಂಗಪ್ಪ, ತುಡಿಕೇನಹಳ್ಳಿ, ಅರಸೀಕೆರೆ ತಾಲ್ಲೂಕು	900–00
20.	ಶ್ರೀ ಮಂಜುನಾಥ್ ಬಿನ್ ರಂಗಪ್ಪ, ಮಾಡಾಳು ಗ್ರಾಮ, ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು	1,700–00
	ಒಟ್ಟು	**50,250–00**

ಖ) ಬಾಕಿ ಇಲ್ಲ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿ ತುಂಬಾ ಜಾಸ್ತಿಯಾಗಿದೆ. ಸುಮಾರು ಎರಡು ವರ್ಷಗಳಿಂದ ಕರಡಿಗಳನ್ನು ಹಿಡಿದು ಹೊರಗಡೆ ಬಿಡಬೇಕೆಂದು ಒತ್ತಡ ತರುತ್ತಿದ್ದೇವೆ. ಹಿಂದಿನ ಸರ್ಕಾರ ಇದ್ದಾಗ, ಹಿಂದಿನ ಸಚಿವರ ಬಳಿ ಕೂಡ ಮಾತನಾಡಿದ್ದೇವೆ. ಆದರೆ ಇವತ್ತಿನ ದಿವಸ ಉತ್ತರದಲ್ಲಿ ಕರಡಿಗಳ ಹಾವಳಿ ಇದೆ ಎಂದು ಒಪ್ಪಿಕೊಂಡಿದ್ದಾರೆ. ಸುಮಾರು 21 ಜನರಿಗೆ ಕರಡಿಗಳು ಕಡಿದಿವೆ. ದೇವರಾಜು ವೀರಪ್ಪ ರಾಮನಹಳ್ಳಿ ಅವರಿಗೆ ಸುಮಾರು 30,000 ರೂಪಾಯಿ ಖರ್ಚಾಗಿದೆ, ಕೇವಲ 1,800 ರೂಪಾಯಿ ಕೊಟ್ಟಿದ್ದೀರಿ. ಹಾಗೆಯೇ ನಂಜುಂಡಪ್ಪ ಎನ್ನುವವರು ಅವರೂ ಕೂಡ ಜಾವಗಲ್‌ನ ಹೋಬಳಿಯಲ್ಲಿರತಕ್ಕಂಥವರು. ಅವರಿಗೆ 1200 ರೂಪಾಯಿ ಕೊಟ್ಟಿದ್ದೀರಿ. ಇದೇ ರೀತಿ 8 ರಿಂದ 10,000 ರೂಪಾಯಿ ಖರ್ಚಾಗಿರುವವರಿಗೆ ಒಂದು ಸಾವಿರ ರೂಪಾಯಿ ಕೊಟ್ಟಿದ್ದೀರಿ. ವಿಜಯಕುಮಾರಿ ಎನ್ನುವವರು ತೋಟಕ್ಕೆ ಸೊಪ್ಪನ್ನು ಕುಯ್ಯುವುದಕ್ಕೆ ಹೋದಂತಹ ಸಂದರ್ಭದಲ್ಲಿ ಹಿಂದೆ ಚಿಪ್ಪನ್ನೇ ಕಿತ್ತಿದೆ. ಸುಮಾರು 40 ರಿಂದ 50,000 ರೂಪಾಯಿ ಖರ್ಚಾಗಿದೆ. ನೀವು ಕೊಟ್ಟಿರುವುದು ಐದು ಸಾವಿರ ರೂಪಾಯಿ. ಇನ್ನೊಬ್ಬ ವೀರಪ್ಪ ಹೊಳಲ್ಕೆರೆ, ಅವನಿಗೆ ಕರಡಿ ಕಚ್ಚಿರುವುದು ನೋಡಿದರೆ ಅವನು ಉಳಿಯುತ್ತಾನೋ ಇಲ್ಲ ಎಂದೆನಿಸುತ್ತದೆ. ದಷ್ಟಪುಷ್ಟವಾಗಿರತಕ್ಕಂತಹ ಹುಡುಗ ಅವನು. ದಷ್ಟಪುಷ್ಟವಾಗಿರತಕ್ಕಂತಹ ಹುಡುಗ ಕರಡಿ ಕೈಯಲ್ಲಿ ಗುದ್ದಾಡಿ ಉಳಿದುಕೊಂಡಿರತಕ್ಕಂಥದ್ದೇ ಹೆಚ್ಚು. ತೊಡೆಯನ್ನು ಕಿತ್ತು ಹಾಕಿದೆ, ಕಣ್ಣನ್ನು ಕಿತ್ತು ಹಾಕಿದೆ, ಅವನಿಗೋಸ್ಕರ ನಾನು ಹೋರಾಟ ಮಾಡಿದೆ. ಅವನ ಒಂದು ಕಣ್ಣು ಕಿತ್ತು ಹೋಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೋರಿಸಿದರೂ ಕಣ್ಣು ಬರಲಿಲ್ಲ. ಆದರೆ ಅವರಿಗೆ 15,000 ರೂಪಾಯಿ ಪರಿಹಾರ ಕೊಟ್ಟಿದ್ದೀರಿ. ಅಲ್ಲಿರತಕ್ಕಂತಹ ಅರಣ್ಯದ ಅಧಿಕಾರಿ ಒಂದು ಕಣ್ಣು ಕಿತ್ತು ಕೊಡಲಿ; ನಾನೇ 50,000 ರೂಪಾಯಿ ಕೊಡುತ್ತೇನೆ. ಆದರೆ ಸರ್ಕಾರ ಕೊಟ್ಟಿದ್ದು 15,000 ರೂಪಾಯಿ! ಅವನು ಡ್ರೈವರ್ ಕೆಲಸಕ್ಕೆ ಇದ್ದ ಅವನ ಮಾಲೀಕ ಡ್ರೈವರ್ ಕೆಲಸದಿಂದ ಮನೆಗೆ ಕಳುಹಿಸಿದ್ದಾರೆ. ಅವನು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಇವರಿಗೆ ಸಾಕಷ್ಟು ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಕಸುವಿನ ಹಳ್ಳಿಯ ಸಿದ್ದಪ್ಪ ಎನ್ನುವವರಿಗೆ 10,000 ರೂಪಾಯಿ ಖರ್ಚಾದರೆ ಒಂದು ಸಾವಿರ ರೂಪಾಯಿ ಕೊಟ್ಟಿದ್ದೀರಿ. ತುಡುಕೇನ ಹಳ್ಳಿಯ ಸಿದ್ದಪ್ಪ ಎನ್ನುವವರಿಗೆ ಸುಮಾರು 70 ರಿಂದ 75 ವರ್ಷ ವಯಸ್ಸಾಗಿದೆ. ನಿಜವಾಗಿಯೂ ಅವರು ಉಳಿಯುವ ಸ್ಥಿತಿಯಲ್ಲಿಲ್ಲ. ನಾನೂ ಕೂಡ ಅವರಿಗೆ ಸಾಕಷ್ಟು ಹಣ ಕೊಟ್ಟು ಆಸ್ಪತ್ರೆಗೆ ಕಳುಹಿಸಿ, ಅವರಿಗೆ ಉಳಿಸಿದ್ದೇವೆ ಅವರಿಗೆ ಉಳಿಸಿದ್ದೇವೆ. ಅವರಿಗೆ 900 ರೂಪಾಯಿ ಕೊಟ್ಟಿದ್ದೀರಿ. ಈ 900 ರೂಪಾಯಿಗಳನ್ನು ಪಡೆಯಲು ಆತ ಒಂದು ವರ್ಷದಿಂದ ತಿರುಗಿದ್ದಾನೆ. ಅವರ ಬಸ್ ಛಾರ್ಜೇ ಇಷ್ಟಾಗುತ್ತದಲ್ಲಾ. ಆದುದರಿಂದ ದಯವಿಟ್ಟು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ಆದಷ್ಟು ಬೇಗ ಹೆಚ್ಚು ನೊಂದಿರತಕ್ಕಂಥ ವ್ಯಕ್ತಿಗಳಿಗೆ ಪರಿಹಾರವನ್ನು ಕೊಡಬೇಕು. ಒಂದು ವರ್ಷದಿಂದೆಲೂ ತಿರುಗಿ ಸಾಕಾಗಿದೆ. ಆ ದೃಷ್ಟಿಯಿಂದ ನಾನು ಅರಣ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಚಾರವಿದೆ.

ಅಧ್ಯಕ್ಷರು : ಬಸವರಾಜುರವರೇ, ಏನು ನೀವು ಭಾಷಣ ಮಾಡುತ್ತಿದ್ದೀರೋ ಅಥವಾ ಪ್ರಶ್ನೆ ಕೇಳುತ್ತಿದ್ದೀರೋ?

ಶ್ರೀ ಎ.ಎಸ್. ಬಸವರಾಜು : ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ನಾವು ಹೊಸಬರು. ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು : ಹೊಸಬರು ನಿಜ. ಆದರೆ ಈಗಾಗಲೇ ಎರಡು ವರ್ಷ ಆಗೋಯ್ತು. ನೀವು ಪ್ರಶ್ನೆಯನ್ನೇ ಈ ರೀತಿ ಕೇಳಿದರೆ ಹೇಗೆ?

ಶ್ರೀ ಎ.ಎಸ್. ಬಸವರಾಜು : ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು : ಅವಕಾಶ ಕೊಟ್ಟಿದ್ದೇನಲ್ಲಾ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ಶಾನೆಗೆರೆಯ ಹತ್ತಿರ ಒಂದು ಆಲದಮರ ಮಳೆಗಾಳಿಯಿಂದ ಬಿದ್ದುಹೋಗಿದೆ. ಇದು ಸುಮಾರು 70 ರಿಂದ 80 ಸಾವಿರ ರೂಪಾಯಿ ಬೆಲೆ ಬಾಳುವ ಮರ. ಅಲ್ಲಿರತಕ್ಕಂಥ ರೇಂಜರ್‌ರವರು ಆ ಮರವನ್ನು ಯಾವುದೋ ಡಿಪೋಗೆ ಮಾರಾಟ ಮಾಡಿ ಹರಾಜನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದರ ವರದಿಯನ್ನು ನೀವು ತರಿಸಿಕೊಳ್ಳಬೇಕು. ಅಲ್ಲಿರತಕ್ಕಂಥ ಹಲವಾರು ಗ್ರಾಮಸ್ಥರೂ ಕೂಡ ಈ ಮರವನ್ನು ಹರಾಜು ಮಾಡಿ ಸುಮಾರು 70 ರಿಂದ 80 ಸಾವಿರ ರೂಪಾಯಿ ಬರುತ್ತದೆ ಎಂದು ಹೇಳಿದ್ದಾರೆ. ಆದರೂ ಕೂಡ ಹರಾಜು ಮಾಡುತ್ತೇವೆ ಎಂದು ಹೇಳಿ ತೆಗೆದುಕೊಂಡು ಹೋಗಿ ಯಾವುದೋ ಒಂದು ಡಿಪೋಗೆ ಕೊಟ್ಟುಬಿಟ್ಟಿದ್ದಾರೆ. ಈ ರೀತಿ ಮಾಡಿರತಕ್ಕಂಥವರ ಬಗ್ಗೆ ತನಿಖೆಯನ್ನು ಮಾಡಿಸಿ ವರದಿಯನ್ನು ತರಿಸಿಕೊಳ್ಳಬೇಕು. ಆದರೆ ಮೊನ್ನೆ ತಾನೆ ಬೀರಪ್ಪ ಅಲ್ಲ, ಹರಿಶ್ಚಂದ್ರನಾಯಕರಿಗೆ 22-6-06 ರಂದು ಕರಡಿ ಕಡಿದುಬಿಟ್ಟಿದೆ. ಇವನು ಈಗ ಸಾವು ಬದುಕಿನ ನಡುವೆ ಹಾಸನದಲ್ಲಿ ಹೋರಾಡುತ್ತಿದ್ದಾನೆ. ಇವನ ಬಗ್ಗೆ ಯಾರೂ ಚಿಂತೆ ಮಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬಸವರಾಜುರವರೇ, ಮೊದಲು ನೀವು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಡಲಿ ಬಿಡಿ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಸಚಿವರು ನಾನು ಕೇಳಿರುವ ಪ್ರಶ್ನೆಗಳಿಗೆ ಸಾಕಷ್ಟು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಚನ್ನಿಗಪ್ಪ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾನವೀಯತೆಯ ದೃಷ್ಟಿಯಿಂದ ಸರ್ಕಾರದಿಂದ ಪರಿಹಾರ ಕೊಡಬೇಕೆಂದು ಕರಡಿಯಿಂದ ಕಚ್ಚಿಸಿಕೊಂಡ ರೈತರ ಪರವಾಗಿ ಕೇಳಿದ್ದಾರೆ. ಅವರ ಪ್ರಶ್ನೆಯಲ್ಲಿಯೇ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಈಗಾಗಲೇ ಸುಮಾರು 20 ರಿಂದ 21 ಜನರಿಗೆ 50,250-00 ರೂಪಾಯಿಗಳನ್ನು ಡಾಕ್ಟರ್ ಸರ್ಟಿಫಿಕೇಟ್ ಆಧಾರದ ಮೇಲೆ ಕೊಟ್ಟಿದೆ. ನಾನು ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಾನೂ ಕೂಡ ನಿಮ್ಮ ಜೊತೆ ಸೇರಿಕೊಂಡು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಹಣಕಾಸಿನ ಸಚಿವರನ್ನು ವಿನಂತಿ ಮಾಡಿದ್ದೇವೆ. ಹೆಚ್ಚಿಗೆ ಹಣವನ್ನು ಪರಿಹಾರವನ್ನು ಕೊಡಬೇಕೆಂದು ಕೇಳಿದ್ದೇವೆ. ಏಕೆಂದರೆ ಈ ಆನೆ ಹಾವಳಿ ಮತ್ತು ಕರಡಿ ಹಾವಳಿಯಲ್ಲಿ ಹೆಚ್ಚು ಪರಿಹಾರ ಕೊಡಬೇಕೆಂದು ನಾನು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಆದುದರಿಂದ ಮಾನ್ಯ ಸದಸ್ಯರೆ,

ತಾವು ಏನು ಹೇಳಿದ್ದೀರಿ ಆ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿದೆ. ಅದು ಬಂದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತೊಮ್ಮೆ ನಾನು ವಿನಂತಿ ಮಾಡಿಕೊಂಡು ತಾವು ಹೇಳಿದ ರೀತಿಯಲ್ಲಿ ಡಬ್ಬಲ್ ಮಾಡತಕ್ಕಂಥ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಅದು ಬಂದ ತಕ್ಷಣ ಕ್ರಮ ತೆಗೆದುಕೊಳ್ಳತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈಗ ಕರಡಿಗಳು ಅರಸೀಕೆರೆಗೆ ನುಗ್ಗಿವೆ. ಬಹುಶಃ ಕರಡಿಗಳ ಸಂತತಿ ಇಡೀ ರಾಜ್ಯದಲ್ಲಿ ಏನಾದರೂ ಜಾಸ್ತಿ ಆಗಿದೆಯೇ? ತಾವು ಅರಣ್ಯ ಇಲಾಖೆ ಸಚಿವರು ಗಮನಿಸಬೇಕು. ಕರಡಿಗಳ ಸಂತತಿ ಇಡೀ ರಾಜ್ಯದಲ್ಲಿ ಏನಾದರೂ ಜಾಸ್ತಿಯಾಗಿದೆಯೇ? ಏಕೆಂದರೆ ಈಗ ಅರಸೀಕೆರೆಗೆ ನುಗ್ಗಿದೆ. ನಾಳೆ ದಾವಣಗೆರೆಗೆ ನುಗ್ಗುತ್ತದೆ, ನಾಳೆ ಚಾಮರಾಜನಗರಕ್ಕೆ ಬರುತ್ತದೆ, ಹೀಗೆ ಎಲ್ಲಾ ಕಡೆಗೂ ಈ ತರಹ ಕರಡಿಗಳ ಸಂತತಿ ಜಾಸ್ತಿಯಾದರೆ ಬರುತ್ತದೆ. ಆದಕಾರಣ ಕರಡಿಗಳ ಸಂತಾನ ಹರಣ ಮಾಡತಕ್ಕಂಥ ಯೋಚನೆ ಸರ್ಕಾರಕ್ಕೇನಾದರೂ ಇದೆಯೆ? ಗಂಡು ಕರಡಿಗಳು ಎಷ್ಟು? ಹೆಣ್ಣು ಕರಡಿಗಳು ಎಷ್ಟು? ಮಾನ್ಯ ಬಸವರಾಜುರವರು ಕೇಳಿದ ಹಾಗೆ ಕರಡಿಯಿಂದ ಕಚ್ಚಿಸಿಕೊಂಡವರಿಗೆ 1250 ರೂಪಾಯಿಗಳಷ್ಟು ಕಡಿಮೆ ಹಣದ ಪರಿಹಾರ ಕೊಡುವುದರಲ್ಲಿ ಅರ್ಥವಿಲ್ಲ. ಇದಕ್ಕೆ ಹೆಚ್ಚು ಹಣದ ಪರಿಹಾರವನ್ನು ಕೊಡಬೇಕಾಗುತ್ತದೆ. ಆದುದರಿಂದ ನಾನು ಮೂಲಭೂತವಾಗಿ ಎರಡು ಪ್ರಶ್ನೆಗಳನ್ನು ಕೇಳಿದ್ದೇನೆ. ಒಂದನೆಯದು ಕರಡಿಗಳ ಸಂಖ್ಯೆ ಎಷ್ಟು? ಹೆಣ್ಣು ಕರಡಿಗಳು ಎಷ್ಟು ಮತ್ತು ಗಂಡು ಕರಡಿಗಳು ಎಷ್ಟು? ಅರಸೀಕೆರೆಗೆ ನುಗ್ಗಿದಂತೆ ಬೇರೆ ಊರುಗಳಿಗೂ ನುಗ್ಗತಕ್ಕಂಥ ಪರಿಸ್ಥಿತಿ ಇದ್ದರೆ, ಈ ಸಂತತಿಯನ್ನು ಕಡಿಮೆ ಮಾಡತಕ್ಕಂಥ ಚಿಂತನೆ ಸರ್ಕಾರಕ್ಕಿದೆಯೆ? ಇದರ ಬಗ್ಗೆ ತಾವೇನು ಯೋಚನೆ ಮಾಡಿದ್ದೀರಿ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಹೆಣ್ಣೆಷ್ಟು? ಗಂಡೆಷ್ಟು? ಎಂದು ಕೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಇನ್ನೂ ಚಿಂತನೆಯನ್ನು ಮಾಡಿಲ್ಲ. ಆದರೂ ಒಟ್ಟು ಎಷ್ಟಿವೆ ಎಂಬ ಬಗ್ಗೆ ಸರ್ಕಾರ ಹೇಳುವ ಕೆಲಸವನ್ನು ಮಾಡುತ್ತದೆ. ಇನ್ನು ಮುಂದೆ ತಾವೇನು ಸಲಹೆಯನ್ನು ಕೊಟ್ಟಿದ್ದೀರಿ ಅದನ್ನು ಮಾಡಲು ಒಂದು ತಜ್ಞರ ಸಮಿತಿ ನೇಮಕ ಮಾಡಿ ಕರಡಿ ಹೆಣ್ಣು ಇದೆಯೋ ಅಥವಾ ಗಂಡು ಇದೆಯೋ ಎಂಬುದನ್ನು ಕಂಡುಹಿಡಿಯಲು ಪ್ರಯತ್ನ ಮಾಡುತ್ತೇವೆ. ಆದರೂ ನೀವು ಹೇಳುವ ಪ್ರಕಾರ ಕರಡಿ ಜಾಸ್ತಿ ಆಗುವುದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸುಪ್ರೀಂಕೋರ್ಟ್ ಆರ್ಡರ್ ಇದೆ, ವನ್ಯ ಜೀವಿ.....,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ತಜ್ಞರ ಸಮಿತಿ ಏನೂ ಮಾಡಬೇಕಾಗಿಲ್ಲ. ನೀವು ವಾಟಾಳ್ ನಾಗರಾಜ್‌ರವರನ್ನೇ ಅಧ್ಯಕ್ಷರನ್ನಾಗಿ ಮಾಡಿ. ಇನ್ನು ಅವರು ಗಂಡು, ಹೆಣ್ಣು ಕರಡಿ ಬಗ್ಗೆ ಕೇಳುತ್ತಿದ್ದಾರೆ. ಗಂಡು ಹೆಣ್ಣು ಕರಡಿಗೆ ಲಗ್ನ ಮಾಡಲು ಅವರನ್ನೇ ಪುರೋಹಿತರು ಎಂದು ಅಪಾಯಿಂಟ್ ಮಾಡಿ. ಆಗ ಸರಿಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಆ ಸಾಮೂಹಿಕ ವಿವಾಹ ಸಮಾರಂಭಕ್ಕೆ ಮಾನ್ಯ ಖರ್ಗೆಯವರು, ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಕುಮಾರಸ್ವಾಮಿ, ಮಾನ್ಯ ಯಡಿಯೂರಪ್ಪ, ಎಲ್ಲರನ್ನೂ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಆ ಕರಡಿಗಳ ಸಾಮೂಹಿಕ ವಿವಾಹವಾಗುತ್ತದಲ್ಲಾ, ಆ ಸಮಾರಂಭಕ್ಕೆ ನಿಮ್ಮೆಲ್ಲರನ್ನೂ ಆಹ್ವಾನ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ತಮ್ಮನ್ನೂ ಸೇರಿಸಿ.

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ. ಕೆರೆಯಲ್ಲಿ ಬೆಳೆದಿರತಕ್ಕಂಥ ಕರಿ ಜಾಲಿ ಮರವನ್ನು, ಬಿದ್ದಿರತಕ್ಕಂಥ ಮರವನ್ನು ತೆಗೆಯಬೇಕು ಎಂದು ಹೇಳಿ 75 ಸಾವಿರ ರೂಪಾಯಿಗಳಿಗೆ ಹರಾಜಾಗಿದೆ.

ಅಧ್ಯಕ್ಷರು : ಕರಡಿ ಬಗ್ಗೆ ಪ್ರಶ್ನೆ ಇದ್ದಾಗ ನೀವು ಬೇರೆ ಏನೋ ಕೇಳಿದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷರೆ, ಇದು ಅರಣ್ಯ ಇಲಾಖೆಗೆ ಸಂಬಂಧಪಟ್ಟದ್ದು.

ಅಧ್ಯಕ್ಷರು : ಅರಣ್ಯ ಇಲಾಖೆ ಎಂದು ಬಿಟ್ಟು ಬೇರೆ ಯಾವುದೋ ಪ್ರಶ್ನೆ ಕೇಳಿದರೆ ಹೇಗೆ? ಕರಡಿ ಪ್ರಶ್ನೆಗೆ ಪೂರಕವಾಗಿದ್ದರೆ ಮಾತ್ರ ಕೇಳಿ.

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷರೆ, ಇದು ಅರಣ್ಯ ಇಲಾಖೆಗೆ ಸಂಬಂಧಪಟ್ಟದ್ದು. ಅಲ್ಲಿ ಮರ ಕಡಿಯುತ್ತಿದ್ದಾರೆ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂತೆಯೇ ಬೇರೆ ಒಂದು ಪ್ರಶ್ನೆಯನ್ನು ನನಗೆ ನೀವು ಕಳುಹಿಸಿ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ವೀರಪ್ಪನಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅವನ ಕಣ್ಣನ್ನು ಕಿತ್ತಿರುವುದರಿಂದ ಅವನ ಜೀವನವೇ ಹಾಳಾಗಿಹೋಯಿತು. ತೊಡೆ ಎಲ್ಲಾ ಹೋಗಿದೆ. ಅವನಿಗೆ ಕೇವಲ 15 ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿದ್ದೀರಲ್ಲಾ. ಸರ್ಕಾರ ಈ ಬಗ್ಗೆ ತಕ್ಷಣ ಸೂಕ್ತ ಕ್ರಮ ತೆಗೆದುಕೊಂಡು ಕನಿಷ್ಠ 50 ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಸಚಿವರು ಆಲದ ಮರದ ಬಗ್ಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಶಾಲೆಗೆರೆಯಲ್ಲಿ ಆಲದ ಮರ ಬಿದ್ದಿರತಕ್ಕಂಥದ್ದು. ಅದು 70 ರಿಂದ 80 ಸಾವಿರ ರೂಪಾಯಿ ಆಗತಕ್ಕಂಥದ್ದು. ಅಲ್ಲಿರತಕ್ಕಂಥ ರೇಂಜರ್ ಯಾರಿದ್ದಾರೆ, ಅವರು ಅದನ್ನು ತೆಗೆದುಕೊಂಡು ಹೋಗಿ ಯಾವುದೋ ಡಿಪೋಗೆ ಮಾಡಿರತಕ್ಕಂಥದ್ದು. ಅವರ ಒಂದು ಸಂಬಂಧ ಮಾಡತಕ್ಕಂಥದ್ದು. ಇದರ ಬಗ್ಗೆ ಸೂಕ್ತ ತನಿಖೆ ಮಾಡಿಸಿ ವರದಿ ತರಿಸಿಕೊಳ್ಳಬೇಕು.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಏನು ಆಲದ ಮರ ಬಿದ್ದುಹೋಗಿರುವ ಬಗ್ಗೆ ಹೇಳಿದ್ದಾರೆ ಅದನ್ನು ಆಕ್ಷನ್ ಮಾಡಿದ್ದಾರೆಯೇ ಅಥವಾ ಕದ್ದು ಮಾರಾಟ ಮಾಡಿದ್ದಾರೆಯೇ ಎಂಬ ಬಗ್ಗೆ ಎನ್‌ಕ್ವೈರಿ ಮಾಡಲು ನಾನು ಪಿ.ಸಿ.ಸಿ.ಎಫ್. ರವರಿಗೆ ಕಳುಹಿಸಿಕೊಟ್ಟು ಅವರ ಬಗ್ಗೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ. ಇನ್ನು 15 ಸಾವಿರ

ರೂಪಾಯಿಗಳನ್ನು ಪರಿಹಾರ ಕೊಟ್ಟಿರುವುದರ ಬಗ್ಗೆ ತಾವು ಏನು ಹೇಳಿದ್ದೀರಿ, ಈ ಸರ್ಕಾರ ಯಾವಾಗಲೂ ಜನರ ಪರವಾಗಿ ಬದ್ಧವಾಗಿರುತ್ತದೆ. ನಾನು ಮತ್ತೆ ವೈಡ್‌ಲೈಫ್ ಆಫೀಸರ್ ಬಳಿ ಕಳುಹಿಸಿಕೊಟ್ಟು ಮತ್ತು ಡಾಕ್ಟರ್ ಹತ್ತಿರ ಕೂಡ ಕಳುಹಿಸಿಕೊಟ್ಟು, ಇನ್ನೂ ಹತ್ತು ಸಾವಿರ ರೂಪಾಯಿ ಕೊಡುವಂಥ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸುವುದು

199 (1125) ಶ್ರೀ ಅಪ್ಪಾ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಫುಡ್ ಪಾರ್ಕ್‌ಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಹೊಸದಾಗಿ ಫುಡ್ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳಗಳು ಯಾವುವು;

ಇ) ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ;

ಈ) ಬಿಜಾಪುರದಲ್ಲಿ ಯಾವಾಗ ಫುಡ್ ಪಾರ್ಕ್ ಸ್ಥಾಪಿಸಲಾಗುವುದು;

ಉ) ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :

ಅ) ರಾಜ್ಯದಲ್ಲಿ ಐದು ಫುಡ್ ಪಾರ್ಕ್‌ಗಳನ್ನು ಕಾರ್ಯಗತಗೊಳಿಸಲಾಗಿದೆ, ಅವುಗಳು ಯಾವುವೆಂದರೆ, ಮಾಲೂರು, ಹಿರಿಯೂರು, ಬಾಗಲಕೋಟೆ, ಜೇವರ್ಗಿ ಮತ್ತು ಮದ್ದೂರು ಫುಡ್ ಪಾರ್ಕ್‌ಗಳು.

ಆ) ಹೊಸ ಫುಡ್ ಪಾರ್ಕ್‌ಗಳನ್ನು ಹಾಸನ, ಶಿವಮೊಗ್ಗ, ಬಿಜಾಪುರ, ಬೆರಗಳೂರು ಗ್ರಾಮಾಂತರ (ಕನಕಪುರ ಮತ್ತು ರಾಮನಗರ) ಬೀದರ್ (ಹುಮ್ನಾಬಾದ್) ಮತ್ತು ಕೊಡಗು ಜಿಲ್ಲೆಗಳಲ್ಲಿ ಸ್ಥಾಪಿಸಲು ಪರಿಶೀಲಿಸಲಾಗುವುದು.

ಇ) ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸಲು ಪ್ರಸ್ತಾವನೆ ಇರುವುದಿಲ್ಲ ಆದಾಗ್ಯೂ, ಬಿಜಾಪುರ ಜಿಲ್ಲೆಯಲ್ಲಿ ಫುಡ್ ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುವುದು.

ಈ) ಪರಿಶೀಲನೆಯಲ್ಲಿದೆ.

ಉ) 1) ಪ್ರಭಾವಿತ ಬಿಡ್ಡುದಾರರಿಂದ ಆಸಕ್ತಿಯನ್ನು ವ್ಯಕ್ತಪಡಿಸಲು ಆಹ್ವಾನಿಸಲಾಗಿದೆ.

2) ಆಯ್ದ ಬಿಡ್ಡುದಾರರನ್ನು ಯೋಜನೆಯ ತಾಂತ್ರಿಕ-ಆರ್ಥಿಕ ಬಾದ್ಯತೆಯಲ್ಲಿ ಸಲ್ಲಿಸಲು ಕೋರಲಾಗಿದೆ.

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ಫುಡ್ ಪಾರ್ಕ್ ಬಿಜಾಪುರದಲ್ಲಿ ಆಗಬೇಕೆಂದು ಬಹಳ ದಿವಸಗಳಿಂದ ಇತ್ತು. ಬಾಗಲಕೋಟೆಗೆ ಹೋಗಿದೆ. ಬಿಜಾಪುರಕ್ಕೂ ಕೊಡಬೇಕೆಂದು ನಾನು ಕೇಳಿದ್ದೆ. ಇದರ ಜೊತೆಗೆ ಇನ್ನೊಂದು ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಅದೇನೆಂದರೆ ವೈನ್ ಪಾರ್ಕ್ ಬಿಜಾಪುರದಲ್ಲಿ ಆಗಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದೇವೆ. ಇದಕ್ಕೆ ಬೇಕಾದಂಥ ವಾತಾವರಣ ಹಾಗೂ